# ಕಬಡ್ಡಿ ಕಬಡ್ಡಿ
## ಉಳಿಯುವುದೇ ಹಳೆಯ ಖದರ್?



ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿಯೂ ಕಮಾಲ್ ನಡೆಸಲು ನೆರವಾಗುವುದೇ 'ಪ್ರೊ. ಕಬಡ್ಡಿ' ಲೀಗ್?

**'ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್' ಜೂನ್ 27ರಿಂದ 30ರವರೆಗೆ ದಕ್ಷಿಣ ಕೊರಿಯಾದಲ್ಲಿ ನಡೆಯಲಿದೆ. 'ಪ್ರೊ. ಕಬಡ್ಡಿ' ಲೀಗ್ ಹೊಳಪಿನಲ್ಲಿ ಅರಳಿರುವ ಆಟಗಾರರ ಸತ್ವಪರೀಕ್ಷೆಗೆ ಹಾಗೂ ಭಾರತದ ಚಿನ್ನದ ಪದಕಗಳ ಗಳಿಕೆಯ ಭವ್ಯ ಪರಂಪರೆಯ ಇತಿಹಾಸವನ್ನು ಮುಂದುವರಿಸುವ ಸವಾಲಿಗೆ ಈ ಟೂರ್ನಿ ಅಗ್ನಿಪರೀಕ್ಷೆಯಾಗಿದೆ.**

■ ಪ್ರಮೋದ

ಏಷ್ಯನ್ ಚಾಂಪಿಯನ್‌ಷಿಪ್, ಏಷ್ಯಾ ಗೇಮ್ಸ್ ಹಾಗೂ ವಿಶ್ವಕಪ್ – ಹೀಗೆ ಅಂತರರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಪ್ರತಿ ಕಬಡ್ಡಿ ಟೂರ್ನಿಗಳಲ್ಲಿ ಭಾರತವೇ ಅಗ್ರಗಣ್ಯ. ಈ ಪಟ್ಟ ಉಳಿಸಿಕೊಳ್ಳುವ ಸವಾಲಿನ ಜೊತೆಗೆ, ಹಳೆಯ ಖದರ್ ಮೆರೆಯುವ ಸಮಯ ಈಗ ಬಂದಿದೆ.

ದೇಸಿ ಕ್ರೀಡೆಯಾದ ಕಬಡ್ಡಿಯನ್ನು ಭಾರತದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಆಡುವುದರಿಂದ ಆಟದ ಸಮಗ್ರ ಕೌಶಲ ಹೊಂದಿರುವ ಗಟ್ಟಿಕಾಳುಗಳು 'ಪ್ರೊ. ಕಬಡ್ಡಿ' ಮೂಲಕ ಹೊರಗಡೆ ಬಂದವು. ಕೆಲವು ವರ್ಷಗಳಲ್ಲಿಯೇ ಜಗತ್ತು ಅವರನ್ನು ಕಣ್ಣರಳಿಸಿಕೊಂಡು ನೋಡುವಂತೆ ಆಯಿತು.

ಜಾತ್ರೆಯ ಸಮಯದಲ್ಲಿ ತೋರುತ್ತಿದ್ದ ಉತ್ತಮ ಪ್ರದರ್ಶನದಿಂದ ಚಪ್ಪಾಳೆಯೇ ಬಹುಮಾನವಾಗಿ ಹೊಟ್ಟೆ ತುಂಬಿಸಿಕೊಳ್ಳುವ ಕಾಲವನ್ನೂ ಮೀರಿ ದೇಸಿ ಕ್ರೀಡೆ ಬೆಳೆದಿದೆ. ಟೂರ್ನಿಗಳನ್ನಾಡಲು ಹೋದಾಗ ವಾಸ್ತವ್ಯಕ್ಕೆ ಸಿಗುತ್ತಿದ್ದ ಶಾಲಾ ಕಟ್ಟಡಗಳು, ದೇವಸ್ಥಾನಗಳೇ ಆಟಗಾರರಿಗೆ ಪಂಚತಾರಾ ಹೋಟೆಲ್‌ಗಳಾಗಿದ್ದವು. ಆದರೆ, 2014ರಲ್ಲಿ 'ಪ್ರೊ. ಕಬಡ್ಡಿ' ಲೀಗ್ ಶುರುವಾದ ಬಳಿಕ ಆಟದ ಮತ್ತು ಆಟಗಾರರ ಖದರ್ ಬದಲಾಗಿದೆ. ಐಷಾರಾಮಿ ಸೌಲಭ್ಯ, ಕೋಟಿ ಲೆಕ್ಕದಲ್ಲಿ ಹಣ, ತಾರಾ ಮೆರುಗು ಆಟಗಾರರ ಸಂಖ್ಯೆ ಹೆಚ್ಚಿಸಿದೆ. ಕಳೆದ ಒಂಬತ್ತು ವರ್ಷಗಳ ಅವಧಿಯಲ್ಲಿ ನಡೆದ ಒಂಬತ್ತು ಆವೃತ್ತಿಗಳಿಂದಲೂ ಹೊಸ ಪ್ರತಿಭೆಗಳು ಉದಯವಾಗಿವೆ.

ಹೀಗಾಗಿ ಜಗತ್ತಿನ ಕಣ್ಣು ಭಾರತದ ಕಬಡ್ಡಿ ಬೆಳವಣಿಗೆ ಮೇಲಿದ್ದು, ಯಾವುದೇ ಅಂತರರಾಷ್ಟ್ರೀಯ ಟೂರ್ನಿ ನಡೆದರೂ ಭಾರತ ತಂಡವನ್ನು ಸೋಲಿಸುವುದು ಇತರೆ ರಾಷ್ಟ್ರಗಳಿಗೆ ಪ್ರತಿಷ್ಠೆಯಾಗಿದೆ. ಫಿಟ್‌ನೆಸ್, ತಾಂತ್ರಿಕ ತರಬೇತಿ, ಹೊಸ ಕೌಶಲಗಳ ಕಲಿಕೆಯಿಂದ ಆಟಗಾರರ ಕಲಿಕಾ ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆಯಾಗಿದೆಯಾದರೂ ನಿರಂತರವಾದ ಟೂರ್ನಿಗಳಿಂದ ಆಟಗಾರರು ಬಸವಳಿದಿದ್ದಾರೆ. ಆದರೆ ಪಂಚತಾರಾ ಮೋಹ ಮಾತ್ರ ಎಲ್ಲ ನೋವು ಬದಿಗೊತ್ತಿ ಆಡುವಂತೆ ಪ್ರೇರೇಪಿಸುತ್ತಿದ್ದು, ಆಟಗಾರರ ಆಟದ ಒಟ್ಟು ಅವಧಿ ಕಡಿಮೆಯಾಗುತ್ತಿದೆ.

1990ರ ದಶಕದಲ್ಲಿ ಭಾರತ ತಂಡಕ್ಕೆ ಆಯ್ಕೆಯಾಗಲು ಆಟಗಾರರು ಸಾಕಷ್ಟು ಪ್ರಯಾಸ ಪಡಬೇಕಾಗುತ್ತಿತ್ತು. ದಿನಗಟ್ಟಲೆ ರೈಲಿನಲ್ಲಿ ಪ್ರಯಾಣಿಸಿ ರಾಜ್ಯ ಮತ್ತು ಅಂತರರಾಜ್ಯಗಳ ನಡುವಿನ ಟೂರ್ನಿಗಳಲ್ಲಿ ಶಕ್ತಿಮೀರಿ ಪ್ರದರ್ಶನ ತೋರಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸುವುದೇ ಸಾಧನೆಯಾಗಿತ್ತು. ಆದರೆ ಈಗ 'ಪ್ರೊ. ಕಬಡ್ಡಿ'ಯಲ್ಲಿ ತೋರುವ ಚಾಕಚಕ್ಯತೆಯೇ ರಾಷ್ಟ್ರೀಯ ತಂಡದ ಆಯ್ಕೆಗೆ ಮಾನದಂಡವಾಗುತ್ತಿದೆ. ಆಗ ಕಷ್ಟದಲ್ಲಿ ಕಲಿಕೆ, ದೇಶವನ್ನು ಪ್ರತಿನಿಧಿಸಿದ ಮೇಲೂ ಅಲ್ಪ ಗಳಿಕೆ ಎನ್ನುವ ಪರಿಸ್ಥಿತಿಯಿತ್ತು. ಇಂದು ಕಲಿಕೆಯ ಜೊತೆಯಲ್ಲಿಯೇ ಭರಪೂರ ಗಳಿಕೆಯ ಕಾಲ.



ಭಾರತ ತಂಡವನ್ನು ಮುನ್ನಡೆಸಲಿರುವ ಪವನ್ ಶೆರಾವತ್ ಹಾಗೂ ನವೀನ್ ಕುಮಾರ್

ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಭಾರತ ತನ್ನ ಗೆಲುವಿನ ಭವ್ಯ ಪರಂಪರೆಯನ್ನು ಹೇಗೆ ಉಳಿಸಿಕೊಳ್ಳುತ್ತದೆ ಎನ್ನುವುದನ್ನು ಎಲ್ಲರೂ ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಇದೇ ಜೂನ್ 27ರಿಂದ 30ರವರೆಗೆ ದಕ್ಷಿಣ ಕೊರಿಯಾದ ಬೂಸಾನ್‌ನಲ್ಲಿ 'ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್' ಆಯೋಜನೆಯಾಗಿದ್ದು, ಈಗಾಗಲೇ ಭಾರತ ತಂಡವನ್ನು ಪ್ರಕಟಿಸಲಾಗಿದೆ.

1980ರಲ್ಲಿ ಕೋಲ್ಕತ್ತದಲ್ಲಿ ಮೊದಲ ಬಾರಿಗೆ ಆರಂಭವಾದ 'ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್' ಇದುವರೆಗೆ ಎಂಟು ಸಲ ನಡೆದಿದ್ದು, ಭಾರತ ಪುರುಷರ ತಂಡ ಏಳು ಟೂರ್ನಿಗಳಲ್ಲಿ ಚಿನ್ನದ ಸಾಧನೆ ಮಾಡಿದೆ. ತಲಾ ಎರಡು ಸಲ ಬಾಂಗ್ಲಾದೇಶ, ಪಾಕಿಸ್ತಾನ, ತಲಾ ಒಂದು ಸಲ ಶ್ರೀಲಂಕಾ, ಜಪಾನ್ ಮತ್ತು ಮಲೇಷ್ಯಾ ಬೆಳ್ಳಿ ಪದಕಗಳನ್ನು ಪಡೆದುಕೊಂಡಿವೆ. ಆರು ವರ್ಷಗಳ ಹಿಂದೆ ಕೊನೆಯ ಬಾರಿಗೆ ನಡೆದಿದ್ದ ಟೂರ್ನಿಯಲ್ಲಿ ಭಾರತ ತಂಡ 36–22 ಅಂಕಗಳಿಂದ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಮಣಿಸಿತ್ತು.

ಭಾರತದ ಸಾಧನೆ ಈ ಟೂರ್ನಿಗೆ ಮಾತ್ರವಲ್ಲದೇ 'ಏಷ್ಯನ್ ಗೇಮ್ಸ್', ವಿಶ್ವಕಪ್, ಸರ್ಕಲ್ ಏಷ್ಯಾ